**D**

**CCE PR**
**UNREVISED**
**REDUCED SYLLABUS**
**NSR & NSPR**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2023**

**S.S.L.C. EXAMINATION, MARCH / APRIL, 2023**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 06. 04. 2023 ] **ಸಂಕೇತ ಸಂಖ್ಯೆ : 33-K**

Date : 06. 04. 2023 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | **5 × 1 = 5** |
| 1. | ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ಮಾತಿಲ್ಲ (ಬಿ) ಮಳೆಗಾಲ<br>(ಸಿ) ಗುರುವನ್ನು (ಡಿ) ದೇವಾಲಯ<br>***ಉತ್ತರ :*** (ಎ) ಮಾತಿಲ್ಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಜೋಡುನುಡಿಗೆ ಉದಾಹರಣೆಯಾಗಿರುವ ಪದ<br>(ಎ) ಕೈಕೊಡು (ಬಿ) ಬನ್ನಿಬನ್ನಿ<br>(ಸಿ) ಕತ್ತಿಮಸೆ (ಡಿ) ಸಿಹಿಕಹಿ<br>***ಉತ್ತರ :*** (ಡಿ) ಸಿಹಿಕಹಿ | |
| 3. | ತೃತೀಯಾ ವಿಭಕ್ತಿ ಪ್ರತ್ಯಯವಿದು<br>(ಎ) ಅನ್ನು (ಬಿ) ಅಲ್ಲಿ<br>(ಸಿ) ಇಂದ (ಡಿ) ಅ<br>***ಉತ್ತರ :*** (ಸಿ) ಇಂದ | |
| 4. | ಇವುಗಳಲ್ಲಿ ಭೂತಕಾಲವನ್ನು ಸೂಚಿಸುವ ಪದ<br>(ಎ) ನೋಡುವನು (ಬಿ) ನೋಡಿದನು<br>(ಸಿ) ನೋಡುತ್ತಾನೆ (ಡಿ) ನೋಡುವಳು<br>***ಉತ್ತರ :*** (ಬಿ) ನೋಡಿದನು | |
| 5. | ಅಂಕಿತನಾಮಕ್ಕೆ ಉದಾಹರಣೆಯಾದ ಪದ<br>(ಎ) ಬೆಂಗಳೂರು (ಬಿ) ಶಿಕ್ಷಕ<br>(ಸಿ) ಹೆಂಗಸು (ಡಿ) ವಿಜ್ಞಾನಿ<br>***ಉತ್ತರ :*** (ಎ) ಬೆಂಗಳೂರು | |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **14 × 1 = 14** |
| 6. | ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?<br>***ಉತ್ತರ :***<br>ಜಿಂಕೆ ಹಾರಿ ತಪ್ಪಿಸಿಕೊಂಡಿದ್ದರಿಂದ ವಿಷದ ಬಾಣವು ಮರಕ್ಕೆ ತಗುಲಿತು. | |
| 7. | ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ?<br>***ಉತ್ತರ :***<br>ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾಗಿ ಮರ ಒಣಗಿ ನಿಂತಿತು. | |
| 8. | ಈ ನಾಡಿನ ಬೆನ್ನೆಲುಬು ಯಾರು ?<br>***ಉತ್ತರ :***<br>ಈ ನಾಡಿನ ಬೆನ್ನೆಲುಬು ಕೃಷಿಕ (ರೈತ). | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 9. | ಅಸಿ–ಮಸಿ ಎಂದರೇನು ?<br>***ಉತ್ತರ :***<br>ಅಸಿ ಎಂದರೆ ಯುದ್ಧ. ಮಸಿ ಎಂದರೆ ಸಾಹಿತ್ಯ ರಚನೆ. | |
| 10. | ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?<br>***ಉತ್ತರ :***<br>ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು. | |
| 11. | ಸಸ್ತನಿಗಳ ಆಶ್ರಯದಾಣಗಳು ಯಾವುವು ?<br>***ಉತ್ತರ :***<br>ಸಸ್ತನಿಗಳ ಆಶ್ರಯದಾಣಗಳು ಗುಹೆ, ಪೊಟರೆ, ಗೂಡು, ಬಿಲ ಮುಂತಾದವುಗಳು. | |
| 12. | ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನಗಳ ಸಮನ್ವಯತೆ ಇದೆ. | |
| 13. | ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?<br>***ಉತ್ತರ :***<br>ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು. | |
| 14. | ಏಣಿ ಜನರಿಗೆ ಮಾಡಿದ ಉಪಕಾರವೇನು ?<br>***ಉತ್ತರ :***<br>ಏಣಿಯು ಜನರು ಮೇಲೇರಲು ಎತ್ತಿ ಹಿಡಿದು ಜನರಿಗೆ ಉಪಕಾರ ಮಾಡಿದೆ. | |
| 15. | ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಬಸವರಾಜ ಸಬರದ ಅವರು ಎಂತಹ ಕಥೆಯೆಂದು ಬಣ್ಣಿಸಿದ್ದಾರೆ ?<br>***ಉತ್ತರ :***<br>ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಬಸವರಾಜ ಸಬರದ ಅವರು ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಹೇಳಿದ್ದಾರೆ. | |
| 16. | ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>***ಉತ್ತರ :***<br>ತುಂಬಿದ ಕುಣಿಗಲ್ ಕೆರೆಯನ್ನು ಜನಪದರು ನಿಂಬೆಯ ಹಣ್ಣಿಗೆ ಹೋಲಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 17. | ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ ?<br>***ಉತ್ತರ :***<br>ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವ ಬಂದನೆಂದು ಉತ್ಪ್ರೇಕ್ಷಿಸಲಾಗಿದೆ. | |
| 18. | ಸೊನ್ನಲಿಗೆ ಸಿದ್ಧರಾಮರ ಪ್ರಕಾರ ಕೆರೆಗಳು ಯಾವಾಗ ನಿಷ್ಪ್ರಯೋಜಕವಾಗುತ್ತವೆ ?<br>***ಉತ್ತರ :***<br>ಸೊನ್ನಲಿಗೆ ಸಿದ್ಧರಾಮರ ಪ್ರಕಾರ ಕೆರೆಗಳನ್ನು ತೋಡಿ ನೀರು ಬರದೇ ಇದ್ದಾಗ ನಿಷ್ಪ್ರಯೋಜಕವಾಗುತ್ತವೆ. | |
| 19. | ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ತಮ್ಮ ವಚನದಲ್ಲಿ ಖಂಡಿಸಿದ್ದಾರೆ ?<br>***ಉತ್ತರ :***<br>ನೀರ ಕಂಡಲ್ಲಿ ಮುಳುಗುವ, ಮರ ಕಂಡಲ್ಲಿ ಸುತ್ತುವ ಧಾರ್ಮಿಕ ನಂಬಿಕೆಗಳನ್ನು ಬಸವಣ್ಣನವರು ಖಂಡಿಸಿದ್ದಾರೆ. | |
| **III.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **12 × 2 = 24** |
| 20. | ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?<br>***ಉತ್ತರ :***<br>“ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ. ತನ್ನ ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ. ಈಗ ದುರದೃಷ್ಟದಿಂದ ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲಾರೆ. ಎಲ್ಲೋ ಹೋಗಿ ಆಹಾರ ಸಂಪಾದಿಸಿಕೊಂಡು ಬರುತ್ತೇನೆ. ಆದರೆ ವಾಸ ಮಾತ್ರ ಇಲ್ಲೆ” ಎಂಬುದು ಮರವನ್ನು ಬಿಟ್ಟು ಹೋಗದೆ ಇರಲು ಗಿಳಿ ನೀಡಿದ ಸಮರ್ಥನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ನಮ್ಮ ದೇಶವನ್ನು ರಕ್ಷಣೆ ಮಾಡುವವರು ಸೈನಿಕರು. ಸೈನಿಕಬಲ ಪ್ರಬಲವಾಗಿಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣಮಾಡಿ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಬಲಿಷ್ಠ ದೇಶ ಎಲ್ಲರನ್ನು ಹೊಡೆದು ಹಾಕಿ ಸೂರ್ಯ ಮುಳುಗದ ಸಾಮ್ರಾಜ್ಯ ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದ್ದರಿಂದ ನಮ್ಮ ದೇಶದ ರಕ್ಷಣಾಪಡೆ ಪ್ರಬಲವಾಗಿರಬೇಕು. | |
| 22. | ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು ?<br>***ಉತ್ತರ :***<br>ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ (ದೋತರ), ತಲೆಗೆ ಕೆಂಪು ಪೇಠ (ಪಟಗ), ನೊಸಲಲ್ಲಿ ತ್ರಿಪುಂಡ್ರಭಸ್ಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದಗಳಿಗೆ ಅರಿವೆಯ ಪಟ್ಟಿಕೆಯನ್ನು ಜೋಡಿಸಿದ ಕಟ್ಟಿಗೆಯ ಹಾವುಗೆಗಳು ಕೈಯಲ್ಲಿ ಉದ್ದನೆಯ ಬೆತ್ತ ಇವು ಪುಟ್ಟರಾಜರ ವೇಷಭೂಷಣಗಳಾಗಿದ್ದವು. | |
| 23. | ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?<br>***ಉತ್ತರ :***<br>ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಸಾಗರದ ದ್ವೀಪ, ಗಿರಿ ಶಿಖರದ ನೆತ್ತಿ, ಮನುಷ್ಯನು ನುಸುಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವಪ್ರದೇಶ ಹೀಗೆ ಎಲ್ಲೆಲ್ಲೂ ಹಕ್ಕಿಗಳು ಗೂಡು ಕಟ್ಟಬಲ್ಲವು. | |
| 24. | ಹಕ್ಕಿಗಳು ಗೂಡನ್ನು ನಿರ್ಮಿಸುವುದರ ಉದ್ದೇಶವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡುಬೇಕು. ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಈ ಎಲ್ಲಾ ಉದ್ದೇಶಗಳಿಗಾಗಿ ಹಕ್ಕಿಗಳು ಗೂಡನ್ನು ನಿರ್ಮಿಸುತ್ತವೆ. | |
| 25. | ಏಣಿ ಹೇಳಿಕೊಳ್ಳುವ ಕಷ್ಟಗಳೇನು ?<br>***ಉತ್ತರ :***<br>ಏಣಿಯ ಮೇಲೆ ಜನ ಹತ್ತಿ ಮೇಲೇರುವಾಗ "ಇವರ ಒಂದೊಂದು ಹೆಜ್ಜೆಯ ಭಾರ ಹೊರುವಾಗ ನಾ ಪಟ್ಟಪಾಡು ನನಗೇ ಗೊತ್ತು. ಲೀಲಾಜಾಲವಾಗಿ ಮೇಲೇರಿದ ಇವರಿಗೆ ಭಾರಹೊತ್ತವರ ಕಾಳಜಿಯೇ ಇಲ್ಲ. ಆನೆ ಭಾರ ಹೊತ್ತ ಗಟ್ಟಿನೆಲದಲ್ಲಿ ಕಾಲೂರಿನಿಂತ ನನಗೆ ಬೀಳುವ ಭಯವಿಲ್ಲ." ಎಂದು ಏಣಿ ತನ್ನ ಕಷ್ಟಗಳನ್ನು ಹೇಳಿಕೊಳ್ಳುತ್ತದೆ. | |
| 26. | ಗೋಪಾಲಕೃಷ್ಣ ಅಡಿಗರು ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ನೀಡುವ ನಿದರ್ಶನಗಳಾವುವು ?<br>***ಉತ್ತರ :***<br>ಜೀವನದಲ್ಲಿ ಒಂದೇ ಗುರಿ ಇರಬೇಕು ಎಂದು ಕವಿ ಗೋಪಾಲಕೃಷ್ಣ ಅಡಿಗರು ಹೇಳಿದ್ದಾರೆ. ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆ. ಬಾಣಕ್ಕೆ ಹಲವು ಗುರಿ ಇರುವುದಿಲ್ಲ. ಒಂದು ದೇಹದಲ್ಲಿ ಒಂದೇ ಆತ್ಮ ಇರುತ್ತದೆ. ದೇಹದಲ್ಲಿ ಎರಡು ಆತ್ಮಗಳಿರುವುದಿಲ್ಲ. ಆದ್ದರಿಂದ ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಈ ನಿದರ್ಶನಗಳನ್ನು ನೀಡಿದ್ದಾರೆ. | |
| 27. | ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು ?<br>***ಉತ್ತರ :***<br>ಕುಣಿಗಲ್ ಕೆರೆ ನೋಡುವವರಿಗೆ ವೈಭವದಿಂದ ಕಾಣುತ್ತಿತ್ತು. ಕೆರೆಯ ಕಲ್ಲುಕಟ್ಟೆ, ಸಂತೆಯ ಹಾದಿ, ಬಾಳೆಯ ಹಣ್ಣಿನಂತೆ ಕೆರೆ ಬಾಗಿರುವುದು, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಿಂಬೆಯ ಹಣ್ಣಿನಂತೆ ಕೆರೆ ನೀರಿನಿಂದ ತುಂಬಿರುವುದು, ಬಾಳೆ, ಗುಬ್ಬಿ, ಸಾರಂಗ ಇವೆಲ್ಲವನ್ನು ಒಳಗೊಂಡ ಕುಣಿಗಲ್ ಕೆರೆ ನೋಡುವವರಿಗೆ ಸುಂದರವಾಗಿ ಕಾಣುತ್ತಿತ್ತು. | |
| 28. | 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' – ಈ ಮಾತಿನ ಅರ್ಥವೈಶಿಷ್ಟ್ಯವೇನು ?<br>***ಉತ್ತರ :***<br>ಅಕ್ಕಮಹಾದೇವಿಯವರ ವಚನದಲ್ಲಿ ಬರುವ 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' ಈ ಮಾತು ವಿಶಿಷ್ಟ ಅರ್ಥವನ್ನು ಹೊಂದಿದೆ. ಮನುಷ್ಯನಿಗೆ ಬರಿ ರೂಪಿದ್ದರೆ ಸಾಲದು, ಮುಖ್ಯವಾಗಿ ಇರಬೇಕಾದುದ್ದು ಒಳ್ಳೆಯ ಮಾನವೀಯ ಗುಣಗಳು. ಒಳ್ಳೆಯ ಗುಣಗಳಿದ್ದಾಗ ರೂಪಕ್ಕೂ ಬೆಲೆ. ಬರಿ ರೂಪಿದ್ದು ಒಳ್ಳೆಯ ಗುಣವಿಲ್ಲದಿದ್ದರೆ ಫಲವಿಲ್ಲ ಎಂದರ್ಥ. ಮರ ನೆರಳು ನೀಡುವಂತೆ, ಧನವಿದ್ದವರಲ್ಲಿ ದಯೇ ಇದ್ದಂತೆ, ಹಸು ಹಾಲು ಕೊಟ್ಟಂತೆ ಮನುಷ್ಯರಲ್ಲಿ ಗುಣವಿರಬೇಕೆಂಬುದು ಈ ಮಾತಿನ ಅರ್ಥ ವೈಶಿಷ್ಟ್ಯ. | |
| 29. | ಶತ್ರುಬಲಕೆ ನಮೋ ಎಂದು ಉತ್ತರನು ಏಕೆ ಹೇಳಿದನು ?<br>***ಉತ್ತರ :***<br>ಉತ್ತರಕುಮಾರನು ಅರ್ಜುನನೊಂದಿಗೆ ಕೌರವ ಸೇನೆ ವಿರುದ್ಧ ಹೋರಾಡಲು ಯುದ್ಧಭೂಮಿಗೆ ಬರುತ್ತಾನೆ. ಎದುರಿಗೆ ಕಣ್ಣು ಹಾಯಿಸಿದಷ್ಟು ದೂರ ಸೈನ್ಯವಿರುತ್ತದೆ. ಭೂಮಿಯೇ ಮರಿಹಾಕಿದೆಯೋ ಎನ್ನುವಂತೆ ಸಮುದ್ರದ ರೀತಿಯಲ್ಲಿರುವ ಸೈನ್ಯವನ್ನು ಕಂಡು ಭಯಗೊಳ್ಳುತ್ತಾನೆ. ನನ್ನಿಂದ ಯುದ್ಧ ಮಾಡಿ ಗೆಲ್ಲಲು ಸಾಧ್ಯವಿಲ್ಲವೆಂದು ಶತ್ರುಬಲಕ್ಕೆ 'ನಮೋ' ಎಂದು ಉತ್ತರನು ಹೇಳಿದನು. | |
| 30. | ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು ?<br>***ಉತ್ತರ :***<br>ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು. ಮನುಷ್ಯನ ಆಸೆಯ ಹಾವು ಯಾರು ಕೆಣಕದಿದ್ದರೂ ಎಲ್ಲರನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಡಿಯುವುದು. ಕಳ್ಳನಿಂದ ಸಾಮ್ರಾಟನವರೆಗೂ ಎಲ್ಲರಿಗೂ ಆಸೆ, ಸ್ವಾರ್ಥ, ಲೋಭವಿರುವಾಗ ಮನುಷ್ಯಳಾದ ರತ್ನಳಿಗೆ ಒಡವೆ-ವಸ್ತುಗಳ ಲೋಭ ಏಕಿರಬಾರದು ? ನಾನು ರತ್ನಳಿಗೆ ಮರಳಿ ದೊರೆಯುತ್ತೇನೋ ಇಲ್ಲವೋ ಎಂಬ ವಿಚಾರಗಳು ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಮೂಡಿಬಂದವು. | |
| 31. | ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ? | |
| | ***ಉತ್ತರ :*** | |
| | "ಇದೊಂದು ದಿನ ಹೋಗಿದ್ದರೆ ನಿಮ್ಮ ಮಗು ನಿಮಗೆ ದಕ್ಕುತ್ತಿರಲಿಲ್ಲ. ದೇವರು ನನಗೂ ಒಳ್ಳೆಯ ಬುದ್ಧಿ ಕೊಟ್ಟು ನಾನೂ ಹೊರಟು ಬಂದೆ. ನೋಡು ಭೀಮಣ್ಣಾ ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ. ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ." ವೈದ್ಯರ ಈ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು. | |
| **IV.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಕುವೆಂಪು : | |
| | ***ಉತ್ತರ :*** | |
| | ಕುವೆಂಪುರವರು ದಿನಾಂಕ ೨೯–೧೨–೧೯೦೪ ರಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಯಲ್ಲಿ ಜನಿಸಿದರು. 'ಚಂದ್ರಮಂಚಕೆ ಬಾ ಚಕೋರಿ', 'ನವಿಲು', 'ಪಕ್ಷಿಕಾಶಿ', 'ಬೆರಳ್‌ಗೆ ಕೊರಳ್', 'ಶೂದ್ರತಪಸ್ವಿ', 'ಜಲಗಾರ', 'ರಸೋವೈಸಃ', 'ವಿಭೂತಿ ಪೂಜೆ', 'ದ್ರೌಪದಿಯ ಸಿರಿಮುಡಿ', 'ನನ್ನದೇವರು ಮತ್ತು ಇತರ ಕಥೆಗಳು', 'ಕಾನೂರು ಹೆಗ್ಗಡಿತಿ', | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

‘ಮಲೆಗಳಲ್ಲಿ ಮದುಮಗಳು’, ‘ಶ್ರೀ ರಾಮಾಯಣ ದರ್ಶನಂ’ – ಇವೇ ಮೊದಲಾದ ೮೦ ಕೃತಿಗಳನ್ನು ಕುವೆಂಪು ಅವರು ರಚಿಸಿದ್ದಾರೆ. ಇವರು ‘ಪದ್ಮಭೂಷಣ’ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ, ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳಿಂದ ಪುರಸ್ಕೃತರು.

33. *ಸಿ.ಪಿ. ಕೃಷ್ಣಕುಮಾರ್ :*

*ಉತ್ತರ :*

ಸಿ.ಪಿ. ಕೃಷ್ಣಕುಮಾರ್ ರವರು ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನ ಹಳ್ಳಿಯಲ್ಲಿ ೧೯೩೯ ರಲ್ಲಿ ಜನಿಸಿದರು. ‘ತಾರಾ ಸುಖ’ ‘ಅನಂತಪೃಥ್ವೀ’, ‘ಬೊಗಸೆ’, ‘ಕನ್ನಡ ಚತುರ್ಮುಖ’, ‘ಕಾವ್ಯಾರಾಧನಾ’, ‘ಜನಪದ ಪ್ರತಿಭೆ’, ‘ಪರಿಭಾವನೆ’, ‘ಸಾಹಿತ್ಯ ತತ್ವಗಳು’, ‘ಪಾಶ್ಚಾತ್ಯ ಕಾವ್ಯಚಿಂತನ’, ‘ಕನ್ನಡ ನಾಗಾನಂದ’, ‘ಕನ್ನಡ ರತ್ನಾವಳಿ’ – ಮುಂತಾಗಿ ಸುಮಾರು ೩೦೦ ಕೃತಿಗಳನ್ನು ಸಿ.ಪಿ.ಕೆ. ಅವರು ರಚಿಸಿದ್ದಾರೆ. ಇವರು ಬಸವ ಸಾಹಿತ್ಯಶ್ರೀ, ವಿದ್ಯುತ್ ಶಿರೋಮಣಿ, ಹನಿಗವನ ಹರಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚುಟುಕ ರತ್ನ ಪ್ರಶಸ್ತಿ ಪುರಸ್ಕೃತರು.

**V. ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** **1 × 3 = 3**

| | |
|---|---|
| ಪಠ್ಯಾಂಶಕ್ಕೆ | 2 ಅಂಕಗಳು |
| ಪದ ಬಳಕೆ ಮತ್ತು ಶೈಲಿ | 1 ಅಂಕ |
| ಒಟ್ಟು | 3 ಅಂಕಗಳು |

34. ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು
ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು ।
ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು
ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ಈ ಪದ್ಯಭಾಗವನ್ನು ಕವಿ ಡಾ. ಬಸವರಾಜ ಸಬರದ ಅವರ 'ಪದಕಟ್ಟಿ ಹಾಡೇನ್' ಕೃತಿಯ 'ಬೋಧಿವೃಕ್ಷದ ಹಾಡು' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಸಿದ್ಧಾರ್ಥ ನಾಡನ್ನು ತೊರೆದು ಕಾಡಿಗೆ ಹೋದ ಸಂದರ್ಭದಲ್ಲಿ ಅಲ್ಲಿ ಕಂಡ ಪ್ರಕೃತಿಯ ದೃಶ್ಯಗಳನ್ನು ಕವಿ ವರ್ಣಿಸಿದ್ದಾರೆ. ಬಳ್ಳಿ ಆಸರೆಗಾಗಿ ಮರವನ್ನು ಅಪ್ಪಿಕೊಂಡು ಹಬ್ಬಿತ್ತು. ಬಳ್ಳಿ ಸಂತಸದಿಂದ ಹೂ ಬಿಟ್ಟು ನಕ್ಕಿತ್ತು. ಹಕ್ಕಿಯೊಂದು ತನ್ನ ಮರಿಗೆ ಮಮತೆಯಿಂದ ಆಹಾರವನ್ನು ನೀಡಿ (ಗುಟುಕು) ಸಂತಸ ವ್ಯಕ್ತಪಡಿಸಿ ಹಾರಿತ್ತು. ಇರುವೆಗಳ ಗುಂಪು ಹುತ್ತದಿಂದ ಸಾಲು ಸಾಲಾಗಿ ನಡೆಯುವ ಮೂಲಕ ಶಿಸ್ತನ್ನು ಪ್ರದರ್ಶಿಸಿದ್ದವು. ಆಕಾಶದಲ್ಲಿ ಬೆಳ್ಳಕ್ಕಿಗಳು ಹಿಂಡುಗಟ್ಟಿ ಆನಂದದಿಂದ ವಿಹರಿಸಿದ್ದವು. ಹೀಗೆ ಕಾಡಿನ ತುಂಬ ಪ್ರೀತಿ, ಉತ್ಸಾಹ, ಆನಂದ ತುಂಬಿದ ಸುಂದರ ಪ್ರಕೃತಿಯ ದೃಶ್ಯಗಳನ್ನು ಕವಿ ಈ ಪದ್ಯಭಾಗದಲ್ಲಿ ಬಣ್ಣಿಸಿದ್ದಾರೆ. | |
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 35. | "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲು ಕೆರೆ" | |
| | ***ಉತ್ತರ :*** | |
| | *ಅಲಂಕಾರದ ಹೆಸರು* : ಉಪಮಾಲಂಕಾರ | |
| | *ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ. | |
| | *ಉಪಮೇಯ :* ಕುಣಿಗಲ್ ಕೆರೆ | |
| | *ಉಪಮಾನ :* ಬಾಳೆಯ ಹಣ್ಣು | |
| | *ಉಪಮಾವಾಚಕ:* ಅಂತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಸಮಾನಧರ್ಮ:* ಕುಣಿಗಲ್ ಕೆರೆ ಮತ್ತು ಬಾಳೆಯ ಹಣ್ಣು ಬಾಗಿರುವುದು | |
| | *ಸಮನ್ವಯ:* ಇಲ್ಲಿ 'ಕುಣಿಗಲ್ ಕೆರೆ' ಎಂಬ ಉಪಮೇಯವನ್ನು 'ಬಾಳೆಯ ಹಣ್ಣು' ಎಂಬ ಉಪಮಾನದಿಂದ 'ಬಾಗಿರುವುದು' ಎಂಬ ಸಮಾನಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಎರಡಕ್ಕೆ ಮಾತ್ರ)** | **2 × 3 = 6** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36. | "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ." | |
| | **ಅಥವಾ** | |
| | "ಆಳಾಗಿ ದುಡಿ, ಅರಸನಾಗಿ ಉಣ್ಣು." | |
| 37. | "ಹಾಸಿಗೆ ಇದ್ದಷ್ಟು ಕಾಲು ಚಾಚು." | |
| | **ಅಥವಾ** | |
| | "ಒಗ್ಗಟ್ಟಿನಲ್ಲಿ ಬಲವಿದೆ." | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 38. | "ಏನಾದರೂ ವರವನ್ನು ಕೇಳು ಕೊಡುತ್ತೇನೆ."<br>***ಉತ್ತರ :***<br>ಈ ವಾಕ್ಯವನ್ನು ಅ.ರಾ. ಮಿತ್ರರವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು. ಗಿಳಿಯ ನಡತೆಯಿಂದ ಇಂದ್ರನಿಗೆ ತುಂಬಾ ಸಂತೋಷವಾಯಿತು. ಮನುಷ್ಯನ ಆದರ್ಶ ಬದುಕಿಗೆ ಗಿಳಿಯ ವರ್ತನೆ ಮಾದರಿಯಾಗಬಲ್ಲದು ಎಂದುಕೊಂಡ. ಪರಹಿತಾಕಾಂಕ್ಷಿಯಾಗಿರುವ ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕು ಎಂದು ತೀರ್ಮಾನಿಸಿದ. ಗಿಳಿಯ ಶ್ರದ್ಧೆಯನ್ನು ಮೆಚ್ಚಿ ಇಂದ್ರ ಗಿಳಿಗೆ "ಏನಾದರೂ ವರವನ್ನು ಕೇಳು ಕೊಡುತ್ತೇನೆ." ಎಂದ. ಈ ಮಾತಿನಲ್ಲಿ ಇಂದ್ರನ ಮೆಚ್ಚುಗೆ, ಕೃತಜ್ಞತಾಭಾವ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 39. | "ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ."<br>***ಉತ್ತರ :***<br>ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರು ಬರೆದ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ, ಮಸಿ, ಕೃಷಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಸಾಹಿತಿಗಳ ಮಹತ್ವವನ್ನು ಕುರಿತು ಹೇಳಿದ್ದಾರೆ. 'ಪೆನ್ನು ಖಡ್ಗಕ್ಕಿಂತ ಹರಿತ' ಖಡ್ಗದಿಂದ ಸಾಧಿಸಲು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಬರೆವಣಿಗೆ ಹಲವರ ಬದುಕನ್ನು ಬದಲಾಯಿಸಬಲ್ಲದು. ಸಾಹಿತ್ಯ ಸತ್ವಯುತವಾಗಿದ್ದರೆ ಸಾಹಿತಿಗಳಿಗೆ ಗೌರವ. ಇಂತಹ ಗೌರವಕ್ಕೆ ಬಸವಾದಿ ಶಿವಶರಣರು, ದಾಸರು, ಕುವೆಂಪು, ಬೇಂದ್ರೆಯಂಥ ಹಲವರು ಪಾತ್ರರಾಗಿದ್ದಾರೆ. ಇಂಥ "ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ." ಎಂಬ ಮಾತಿನಲ್ಲಿ ದೇಶದ ಪ್ರಗತಿಗೆ ಸಾಹಿತ್ಯ ಮತ್ತು ಸಾಹಿತಿಗಳ ಅವಶ್ಯಕತೆ ತುಂಬಾ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 40. | "ಆ ಗೋಪಾಲ ಕೊಡಬೇಕು, ನಾವು ಉಣಬೇಕು."<br>***ಉತ್ತರ :***<br>ಈ ವಾಕ್ಯವನ್ನು ಕುವೆಂಪುರವರು ಬರೆದ 'ನನ್ನ ಗೋಪಾಲ' ಎಂಬ ಕೃತಿಯ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಗೋಪಾಲನ ತಾಯಿ ಮಗ ಗೋಪಾಲನಿಗೆ ಹೇಳುತ್ತಾಳೆ. ಗೋಪಾಲ "ಶಾಲೆಯಿಂದ ಸಂಜೆಯ ಸಮಯದಲ್ಲಿ ಮನೆಗೆ ಬರುವಾಗ ಹೆದರಿಕೆಯಾಗುತ್ತದೆ. ಸ್ನೇಹಿತರಿಗೆ ಆಳುಗಳು ಜೊತೆಗಿದ್ದಾರೆ ನನಗೆ ಯಾರೂ ಇಲ್ಲ" ಎಂದು ಅಮ್ಮನಲ್ಲಿ ಹೇಳಿದಾಗ. "ಅವರೆಲ್ಲ ಶ್ರೀಮಂತರ ಮಕ್ಕಳು ನಮಗೆ ಹೊಟ್ಟೆಗೆ ಹಿಟ್ಟು ಸಿಕ್ಕುವುದೇ ಕಷ್ಟ" ಎಂದು ತನ್ನ ಬಡತನವನ್ನು ಹೇಳುತ್ತಾ. "ಆ ಗೋಪಾಲ ಕೊಡಬೇಕು ನಾವು ಉಣಬೇಕು" ಎಂದು ತಾಯಿ ಹೇಳುತ್ತಾಳೆ. ಈ ಮಾತಿನಲ್ಲಿ ಕುಟುಂಬದ ಬಡತನ, ದೇವರ ಮೇಲಿನ ನಂಬಿಕೆ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 41. | "ನಮ್ರತೆಗೆ ನಾ ಕರಗುತ್ತೇನೆ."<br>***ಉತ್ತರ :***<br>ಈ ವಾಕ್ಯವನ್ನು ಸುಕನ್ಯಾ ಮಾರುತಿಯವರು 'ಸಮಗ್ರ ಕವನ ಸಂಕಲನ' ಕೃತಿಯ 'ಏಣಿ' ಪದ್ಯದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಕವಯಿತ್ರಿ ಏಣಿಯ ಮೂಲಕ ಈ ಮಾತನ್ನು ಹೇಳಿಸಿದ್ದಾರೆ. ಏಣಿಯನ್ನು ಬಳಸಿ ಮೇಲೇರಿದವರು ಕೈಬಿಡುತ್ತಾರೆ. ಏಣಿ ತನ್ನ ಕಷ್ಟ ಹೇಳಿಕೊಳ್ಳುತ್ತದೆ. ಮೇಲೇರಿ ಏಣಿಯನ್ನು ತಿರಸ್ಕರಿಸುವ ಜನರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಗ್ಗೆ ಏಣಿಗೆ ಬೇಸರವಿದೆ ಆದರೂ ಹಮ್ಮು ಕರಗಿ ಅರಿವು ಮೂಡಿದಾಗ ನಾನವರಿಗೆ ನಿಲುಕುತ್ತೇನೆ. "ನಮ್ರತೆಗೆ ನಾ ಕರಗುತ್ತೇನೆ." ಎಂದು ಏಣಿ ಜನರಿಗೆ ಹೇಳುತ್ತಾದೆ. ಈ ಮಾತಿನಲ್ಲಿ ಏಣಿಯ ಕ್ಷಮಾಗುಣ, ವಿಶಾಲ ಮನೋಭಾವ, ಬೆಳೆಯಬಲ್ಲವರನ್ನು ಎತ್ತಿಹಿಡಿಯುವ ಬಯಕೆ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 42. | "ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು."<br>***ಉತ್ತರ :***<br>ಈ ವಾಕ್ಯವನ್ನು ಸಿ.ಪಿ. ಕೃಷ್ಣಕುಮಾರ್ ಅವರು ರಚಿಸಿದ 'ಬೊಗಸೆ' ಎಂಬ ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿ ಮಾನವನು ಬದುಕಿನಲ್ಲಿ ಹೇಗಿರಬೇಕೆಂಬುದನ್ನು ಕುರಿತು ಹೇಳಿದ್ದಾರೆ. ಮನುಷ್ಯ ಸದ್ದುಗದ್ದಲ ಮಾಡದೆ ನಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕು. ಕೂಗಾಡಿ, ಹಾರಾಡಿ ಫಲವಿಲ್ಲ. ಶಾಂತಿಯಲಿ ಬದುಕಿನ ಕರ್ತವ್ಯವನ್ನು ಮುಗಿಸಬೇಕು ಎಂಬುದಕ್ಕೆ ದೀಪದೆದುರಿಗೆ ತಿಮಿರ ಸರಿಯುವಂತೆ "ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು" ಎಂಬ ಹೋಲಿಕೆ ನೀಡುತ್ತಾರೆ. ಈ ಮಾತಿನಲ್ಲಿ ಮನುಷ್ಯ ಅಳವಡಿಸಿಕೊಳ್ಳಬೇಕಾದ ಜೀವನ ಮೌಲ್ಯಗಳು ಸ್ವಾರಸ್ಯಕರವಾಗಿ ಮೂಡಿ ಬಂದಿವೆ. | |
| 43. | "ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ."<br>***ಉತ್ತರ :***<br>ಈ ವಾಕ್ಯವನ್ನು ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಈ ಮಾತನ್ನು ಕವಿ ಉತ್ತರಕುಮಾರ ಯುದ್ಧ ಭೂಮಿಯಿಂದ ಓಡಿದ ರೀತಿಯನ್ನು ಕುರಿತು ಹೇಳಿದ್ದಾರೆ. ಕೌರವ ಸೇನೆ ವಿರಾಟರಾಜನ ಗೋವುಗಳನ್ನು ಅಪಹರಿಸಿದಾಗ ಅರಮನೆಯಲ್ಲಿ ಜಂಭಕೊಚ್ಚಿಕೊಳ್ಳುತ್ತಿದ್ದ ಉತ್ತರನು ಅರ್ಜುನನನ್ನು ಸಾರಥಿಯನ್ನಾಗಿ ಮಾಡಿಕೊಂಡು ಯುದ್ಧಭೂಮಿಗೆ ಬಂದನು. ಆಗ ಕೌರವ ಸೇನೆಯನ್ನು ನೋಡಿ ಭಯಗೊಳ್ಳುತ್ತಾನೆ. ಅರ್ಜುನನಿಗೆ ರಥವನ್ನು ನಿಲ್ಲಿಸಲು ಹೇಳಿದರೂ ಆತ ಕೇಳದಿದ್ದಾಗ ಉತ್ತರನು ರಥದ ಹಿಂದೆ ಬಂದು ಜಿಗಿದು "ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ." ಇಲ್ಲಿ ಕವಿಯು ಹಾಸ್ಯಮಯವಾಗಿ ಚಿತ್ರಿಸಿದ್ದು ಸ್ವಾರಸ್ಯಕವಾಗಿ ಮೂಡಿಬಂದಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 44. | ಕೆಸರೊಳಿದ್ದರು ..................................................<br>..................................................................<br>..................................................................<br>.................................................. ಸಾರ್ಥಕತೆಗೆ.<br>**ಅಥವಾ**<br>ಒಂದು ಬಾಣಕೆ ..............................................<br>..................................................................<br>..................................................................<br>..................................... ಹೋರಾಡು ಹಗಲಿರುಳು.<br>***ಉತ್ತರ :***<br>ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ<br>ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ<br>ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ<br>ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಂದು ಬಾಣಕೆ ಗುರಿಯು ಹಲವಿರುವುದುಂಟೆ ?<br>ಒಂದು ದೇಹದೊಳಾತ್ಮವೆರಡಿರುವುದುಂಟೆ ?<br>ಒಂದು ಜೀವನಕೇಕೆ ಹಲವು ಸಾಧ್ಯಗಳು ?<br>ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು. | |
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 45. | ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ಸ್ವಾರಸ್ಯಕರವಾಗಿ ಬರೆಯಿರಿ.<br>**ಅಥವಾ**<br>ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.<br>***ಉತ್ತರ :***<br>ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಂ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಂನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು.<br>ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಒಳಹೊರಗೆ ಸೇರಿದ್ದ ಜನರನ್ನು ಕಂಡು ಆಶ್ಚರ್ಯಚಕಿತರಾದರು. ಮನೆಯ ಒಳಗೆ ಬಂದು ನೋಡಿದರೆ ತಲ್ಲೀನನಾಗಿ ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟಯ್ಯನನ್ನು ನೋಡಿ ನಿಬ್ಬೆರಗಾದರು. ಮಾವ ಬಂದದ್ದು ತಿಳಿದು "ತಪ್ಪಾಯಿತು ಕ್ಷಮಿಸು ನಿನ್ನ ಹಾರ್ಮೋನಿಯಂನ್ನು ಮುಟ್ಟುವುದಿಲ್ಲ" ಎಂದನು. ಆಗ ಮಾವ "ಮಗು ಇಂದಿನಿಂದ ಇದು ನನ್ನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹಾರ್ಮೋನಿಯಂ ಅಲ್ಲ, ನಿನ್ನದೇ ನಿನ್ನ ಆಸ್ತಿ'' ಎಂದರು. ಹೀಗೆ ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| | **ಅಥವಾ** | |
| | ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಗೆ ಬಂದರು. ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿಬಂತು. ಮಗನನ್ನು ಕಳಿಸಿಕೊಡುವಂತೆ ಕೇಳಿಕೊಂಡರು. ಗವಾಯಿಗಳು ''ಅವನು ಬಂದರೆ ಕರೆದುಕೊಂಡು ಹೋಗು ತಾಯಿ'' ಎಂದು ಹೇಳಿದರು. ತಾಯಿ ಮಗನನ್ನು ಮನೆಗೆ ಬರುವಂತೆ ಕೇಳಿಕೊಂಡರು. ಆಗ ಪುಟ್ಟಯ್ಯ ''ನನಗೆ ನನ್ನ ಸರ್ವಸ್ವವೂ ಗುರುಗಳು. ಸಮಾಜದ ಹಣದಿಂದ ವಿದ್ಯೆ ಕೊಟ್ಟಿದ್ದಾರೆ, ಭವದ ಬಂಧನಗಳನ್ನು ತೊಡೆದು ಹಾಕಿರುವೆ. ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಮಾಜಕ್ಕರ್ಪಿಸು ತಾಯಿ'' ಎಂದು ಕೇಳಿಕೊಂಡನು. | |
| | ಸಿದ್ಧಮ್ಮ ಮಗನಿಗೆ ಆಶೀರ್ವದಿಸಿ ''ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ ಹೆಂಡತಿ, ಮಕ್ಕಳು ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗನೆ. ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನಡೆದು ಅಮರನಾಗು ಕಂದ'' ಎಂದು ಹೇಳಿದರು. ಹೀಗೆ ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗ ಸ್ವಾರಸ್ಯಕರವಾಗಿ ಅಭಿವ್ಯಕ್ತವಾಗಿದೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** **( 2 + 2 )** |
| 46. | ಸಮುದ್ರಕ್ಕೆ ಸಮೀಪವಾಗಿ ಸಂಪದ್ಭರಿತವಾಗಿರುವ ಈ ಪಶ್ಚಿಮ ಘಟ್ಟದ ಸಾಲು ಇತಿಹಾಸಕಾಲದಿಂದಲೂ ವಿದೇಶಿಯರ ಗಮನಸೆಳೆದಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಾಲ್ಕು ಸಾವಿರ ವರ್ಷಗಳಿಂದಲೂ ತನ್ನ ಗೊಬ್ಬರದಿಂದಲೇ ತಾವು ಪುಷ್ಟಿಯಾಗುತ್ತ, ನಿರಾತಂಕವಾಗಿ ಬೆಳೆಯುತ್ತಿದ್ದ, ಈ ಅಡವಿಗಳಲ್ಲಿ ಅನೇಕ ಬಗೆಯ ವಿಶಿಷ್ಟ ಮಸಾಲೆ ಪರಿಮಳ ಸಸ್ಯಗಳೂ, ಔಷಧಿಯ ಮೂಲಿಕೆಗಳೂ ವಿಕಾಸವಾಗಿದ್ದು, ದೂರದ ಪರ್ಷಿಯಾದಿಂದ ಹಿಡಿದು ಪೋರ್ಚುಗಲ್‌ವರೆಗಿನ ವ್ಯಾಪಾರಿಗಳನ್ನು ಆಕರ್ಷಿಸಿತ್ತು. ಆನಂತರ ಬ್ರಿಟೀಷರು ಬಂದರು. | |
| | ಆವರೆಗೂ ನಾಗರಿಕತೆ ಸೋಂಕಿರದ ಈ ಕಾಡುಗಳಲ್ಲಿ ಮನುಷ್ಯನೂ ಅರಣ್ಯದ ಅವಿಭಾಜ್ಯ ಅಂಗವಾಗಿಯೇ ಇದ್ದ. ತನಗೆ ಬೇಕಿದ್ದಷ್ಟನ್ನೇ ಬಳಸಿಕೊಂಡು, ಒಂದು ಕಿತ್ತರೆ ಇನ್ನೊಂದನ್ನು ನೆಡುತ್ತಾ, ತನ್ನಷ್ಟಕ್ಕೆ ತಾನಿರುತ್ತಿದ್ದ. | |
| | ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೆ. ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು, ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ, ಜೇನು, ಬೆತ್ತ, ಧೂಪ, ದಂತ, ರಾಳ, ಬಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾಯಿತು. ಕೊಡಲಿ, ಗುದ್ದಲಿ, ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ. ನೋಡನೋಡುತ್ತ ನಿರ್ನಾಮವಾಗುತ್ತಿವೆ. | |
| | *ಪ್ರಶ್ನೆಗಳು :* | |
| | ಅ) ಪಶ್ಚಿಮ ಘಟ್ಟಗಳ ಪತನಕ್ಕೆ ಕಾರಣಗಳೇನು ? | |
| | ಬ) ಪಶ್ಚಿಮ ಘಟ್ಟಗಳು ವಿದೇಶಿಯರ ಗಮನ ಸೆಳೆದಿದ್ದು ಹೇಗೆ ? | |
| | ***ಉತ್ತರ :*** | |
| | ಅ) ಸ್ವಾತಂತ್ರ್ಯದ ನಂತರ ಜನಸಂಖ್ಯೆ ಏರುತ್ತಿತ್ತು. ಕೃಷಿಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆರಂಭಿಸಿದರು. ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ, ಜೇನು, ಬೆತ್ತ, ಧೂಪ, ದಂತ, ರಾಳ, ಬಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾಗಿ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾಯಿತು. ಈ ಎಲ್ಲಾ ಅಂಶಗಳು ಪಶ್ಚಿಮ ಘಟ್ಟಗಳ ಪತನಕ್ಕೆ ಕಾರಮವಾದವು. | |
| | ಬ) ಸಮುದ್ರಕ್ಕೆ ಸಮೀಪವಾಗಿ ಸಂಪದ್ಭರಿತವಾಗಿರುವ ಈ ಪಶ್ಚಿಮ ಘಟ್ಟದ ಸಾಲು ಇತಿಹಾಸಕಾಲದಿಂದಲೂ ವಿದೇಶಿಯರ ಗಮನಸೆಳೆದಿತ್ತು. ನಾಲ್ಕು ಸಾವಿರ ವರ್ಷಗಳಿಂದಲೂ ತನ್ನ ಗೊಬ್ಬರದಿಂದಲೇ ಪುಷ್ಟಿಯಾಗುತ್ತ, ನಿರಾತಂಕವಾಗಿ ಬೆಳೆಯುತ್ತಿದ್ದ, ಅಡವಿಗಳಲ್ಲಿ ಅನೇಕ ಬಗೆಯ ವಿಶಿಷ್ಟ ಮಸಾಲೆ ಪರಿಮಳ ಸಸ್ಯಗಳು, ಔಷಧಿಯ ಮೂಲಿಕೆಗಳು ವಿಕಾಸವಾಗಿದ್ದು, ವಿದೇಶಿಯರ ಗಮನ ಸೆಳೆಯಿತು. | |
| **XII.** | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 47. | ಕ್ರೀಡೆಗಳ ಮಹತ್ವ.<br><br>**ಅಥವಾ**<br><br>ದೂರದರ್ಶನದ ಪ್ರಯೋಜನಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XIII. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 48. | ನಿಮ್ಮನ್ನು ಕಾರವಾರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಶ್ವಿನಿ' ಎಂದು ಭಾವಿಸಿಕೊಂಡು, ಕನ್ನಡ 'ಶಬ್ದಕೋಶ' ಕಳುಹಿಸಿಕೊಡುವಂತೆ ಕೋರಿ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ನಾಗರಾಜ' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಪ್ರವಾಸದ ಅನುಭವಗಳನ್ನು ತಿಳಿಸಿ, ಉಡುಪಿಯ ವಿದ್ಯಾನಗರ ನಿವಾಸಿಯಾದ 'ನಿರಂಜನ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |